( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 24/03/2022**
**ಅಸಲು ದಾವೆ.ನಂ. 281/2017**
**ಡಿ.ಡಬ್ಲ್ಯೂ 1**

( ಪಾಟೀ ಸವಾಲುಃ ಶ್ರೀ. ಎಂ.ವೈ.ಪಿ. ವಕೀಲರಿಂದ ವಾದಿಯ ಪರ )

ನನ್ನ ಗಂಡನ ಹೆಸರು ವೈ.ಸಿ. ನಾಗರಾಜು. 1 ನೇ ಪ್ರತಿವಾದಿಗೆ ನನ್ನ ಗಂಡ ತಮ್ಮನಾಗಬೇಕು. ನಾನು ಯಲಗತ್ತವಳ್ಳಿಯಲ್ಲಿ ವಾಸವಿರುತ್ತೇನೆ. ವಾದಿ ಯಲಗತ್ತವಳ್ಳಿಯಲ್ಲಿ ವಾಸವಿರುತ್ತಾರೆ. 1 ನೇ ಪ್ರತಿವಾದಿ ಅಗ್ರಹಾರದಲ್ಲಿ ವಾಸವಿರುತ್ತಾರೆ, ಹಾಗೂ 2 ನೇ ಪ್ರತಿವಾದಿಯು ಯಲಗತ್ತವಳ್ಳಿಯಲ್ಲಿ ವಾಸವಾಗಿರುತ್ತಾರೆ. 1 ನೇ ಪ್ರತಿವಾದಿಯ ಮೂಲ ಊರು ಯಲಗತ್ತವಳ್ಳಿ ಎಂದರೆ ಸರಿ. 1 ನೇ ಪ್ರತಿವಾದಿ ಅಗ್ರಹಾರದಲ್ಲಿ 10-12 ವರ್ಷಗಳಿಂದ ವಾಸವಿರುತ್ತಾರೆ. 1 ನೇ ಪ್ರತಿವಾದಿಗೆ ಯಲಗತ್ತವಳ್ಳಿಯಲ್ಲಿ ಮನೆ ಇದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯೊಂದಿಗೆ ವಾಸವಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮಗ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯನ್ನು ಸ್ವಾಮಿಗೌಡ ಎಂಬುವವರಿಗೆ ಅಗ್ರಹಾರಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ನನ್ನ ಹಾಗೂ 1 ನೇ ಪ್ರತಿವಾದಿಯ ಮನೆ ಸುಮಾರು ಅರ್ಧ ಕಿ.ಮಿ.ಯ ದೂರದಲ್ಲಿ ಇರುತ್ತದೆ. ನಾನು ಹಾಗೂ 1 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ಚೆನ್ನಾಗಿ ಇದ್ದೇವೆ ಎಂದರೆ ಸರಿ. 1 ನೇ ಪ್ರತಿವಾದಿಯ ಮನೆಯಲ್ಲಿ ಯಾವುದಾದರು ವ್ಯವಹಾರ ನಡೆದರೆ ನನಗೆ ತಿಳಿಯುವುದು ಎಂದರೆ ಸರಿಯಲ್ಲ.

ಪ್ರಸ್ತುತ ದಾವೆಯಲ್ಲಿ ಇರುವ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮೊದಲು ಆದ ವ್ಯವಹಾರದ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಮೊದಲು ಯಾವುದೇ ವ್ಯವಹಾರ ಆಗಿರಲಿಲ್ಲ, ತನಗೆ ಮೊದಲನೇ ಬಾರಿ ದಾವಾ ಸ್ವತ್ತಿನ ವ್ಯವಹಾರ ಆಗಿತ್ತು ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡಿರುತ್ತೇನೆ ಎಂದು ಹೇಳಲಾದ ಆಸ್ತಿಯ ಮೂಲ ಸರ್ವೆ ನಂಃ77/4 ಆಗಿರುತ್ತದೆ. ಸದರಿ ಸರ್ವೆ ನಂಬರ್ ಆಸ್ತಿಗೆ ಸಂಬಂಧಪಟ್ಟಂತೆ ನಾನು ಹಿಂದಿನ ದಾಖಲೆಗಳನ್ನು ನೋಡಿರುತ್ತೇನೆ. ಪ್ರಸ್ತುತ ದಾವೆ ಸಲ್ಲಿಸಿರುವ ದಾವಾ ಸ್ವತ್ತಿನ ಮೂಲ ಸರ್ವೆ ನಂಬರ್ 87/3 ಪಿ4 ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನು ಅಣ್ಣೇಗೌಡರ ಜಮೀನು ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 87/3 ಪಿ4 ರಲ್ಲಿ ಒಟ್ಟು ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ

ತಂದೆ ಸುಬ್ಬೇಗೌಡರವರ ಹೆಸರಿನಲ್ಲಿ ಸರ್ವೆ ನಂಬರ್ 87/3 ಪಿ4 ರಲ್ಲಿ 1 ಎಕರೆ 12 ಗುಂಟೆ ಜಮೀನಿಗೆ ಖಾತೆ ಇತ್ತು ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯ ಹೆಸರು ಸುಬ್ಬೇಗೌಡ ಎಂದರೆ ಸರಿ. ಸದರಿ ಲಕ್ಷ್ಮಮ್ಮ ಬಿನ್ ಸುಬ್ಬೇಗೌಡರವರ ಹೆಸರಿನಲ್ಲಿ ಮೂಲ ಸರ್ವೆ ನಂಬರ್ 87/3 ಪಿ4 ರಲ್ಲಿ 1 ಎಕರೆ 12 ಗುಂಟೆ ಜಮೀನಿಗೆ ಪಹಣಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಲಕ್ಷ್ಮಮ್ಮ ಬಿನ್ ಸುಬ್ಬೇಗೌಡ ಎಂದು ನಮೂದಾಗಿರುವ ವ್ಯಕ್ತಿ ಈ ದಾವೆಯ 1 ನೇ ಪ್ರತಿವಾದಿ ಎಂದರೆ ಸರಿ. ಸದರಿ ಜಮೀನು ನಾನು ತೆಗೆದುಕೊಂಡ ನಂತರ ಪೋಡಾಗಿರುತ್ತದೆ. ಸರ್ವೆ ನಂಬರ್ 87/3 ಪಿ4 ರ ಜಮೀನು 2015 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಪೋಡಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಪೋಡಾದ ನಂತರ ಹೊಸ ಸ.ನಂಃ 87/4 ಎಂದು 1 ನೇ ಪ್ರತಿವಾದಿಯ ಹೆಸರಿಗೆ 1 ಎಕರೆ 12 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸ.ನಂಃ 87/3 ಪಿ4 ಕ್ಕೆ ಸಂಬಂಧಪಟ್ಟಂತೆ ಹಿಂದೆ ಸರ್ವೆ ಸ್ಕೆಚ್ ಆಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 87/3 ಪಿ4 ರಲ್ಲಿ ಮೊದಲು ದುರಸ್ತು ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ 1 ರಿಂದ 3 ನೇ ಪ್ರತಿವಾದಿಯರು ಸರ್ವೆ ನಂಬರ್ 87/3 ಪಿ4 ಲ್ಲಿ 1 ಎಕರೆ 12 ಗುಂಟೆ ಪೈಕಿ 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಮಾರಟ ಮಾಡಿದ ವಿಚಾರ ನನಗೆ ಗೊತ್ತಾ ಎಂದರೆ ನಾನು 1 ನೇ ಪ್ರತಿವಾದಿಗೆ ಇದರ ಬಗ್ಗೆ ಕೇಳಿರುತ್ತೇನೆ, ಅವರು ಆ ರೀತಿ ಮಾರಾಟ ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ. 1 ರಿಂದ 3 ನೇ ಪ್ರತಿವಾದಿಯರು ದಿಃ24-06-2010 ರಂದು ದಾವಾ ಸ್ವತ್ತನ್ನು ವಾದಿಗೆ ಕ್ರಯದ ಕರಾರು ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ರೂ. ಎರಡು ಲಕ್ಷದ ಇಪ್ಪತ್ತುನಾಲ್ಕು ಸಾವಿರ (2, 24,000/-) ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ದಿನವೇ ರೂ.2,05,000/- ರೂಾ.ಗಳನ್ನು ವಾದಿಯಿಂದ 1 ರಿಂದ 3 ನೇ ಪ್ರತಿವಾದಿಯ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರದಲ್ಲಿ ಸರ್ವೆ ನಂಬರ್87/3 ಪಿ4 ಜಮೀನಿನಲ್ಲಿ ಪೋಡಾಗದೇ ಇದ್ದ ಕಾರಣ ಅದರ ಸರ್ವೆ ಸ್ಕೆಚ್ ಮಾಡಿಸಿ ದುರಸ್ತಾದ ನಂತರ ಸದರಿ ಜಮೀನನ್ನು ಕ್ರಯ ಪತ್ರದ ಮೂಲಕ ಬರೆದುಕೊಡುವುದಾಗಿ ಒಪ್ಪಿದ್ದರು ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿ 1 ನೇ ಪ್ರತಿವಾದಿ ತನ್ನ ಹೆಸರಿಗೆ ಪ್ರತ್ಯೇಕವಾಗಿ ಪೋಡಾಗಿ ತನ್ನ ಹೆಸರಿಗೆ ಪಹಣಿ ಬಂದ ನಂತರ ಕ್ರಯ ಪತ್ರವನ್ನು ಬರೆದುಕೊಡುವುದಾಗಿ ಒಪ್ಪಿದ್ದರು ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರಿಗೆ ಅವರು

ಬರೆದುಕೊಟ್ಟ ಕ್ರಯದ ಕರಾರು ಪತ್ರದ ಪ್ರಕಾರ ಕ್ರಯ ಪತ್ರವನ್ನು ಮಾಡಿಕೊಡಲು ವಾದಿಯು ಆಗಾಗ ಕೇಳುತ್ತಿದ್ದರು ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯ ಹಾಕಿದ ನಂತರ ಈ ದಾವೆಯಲ್ಲಿ ಹಾಕಿರುವ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. 2010 ನೇ ಸಾಲಿನಲ್ಲಿ 1 ರಿಂದ 3 ನೇ ಪ್ರತಿವಾದಿಯ ಬರೆದುಕೊಟ್ಟ ಕ್ರಯದ ಕರಾರು ಪತ್ರ ಇಂದಿಗೂ ಮುಂದುವರೆಯುತ್ತಿದೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರಕ್ಕೆ ಎಂದರೆ ನಿಪಿ1 ಕ್ಕೆ 1 ರಿಂದ 3 ನೇ ಪ್ರತಿವಾದಿಯರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೆ ಪ್ರತಿವಾದಿಯ ಸಹಿಗಳನ್ನು ನೋಡಿದರೆ ನಾನು ಗುರುತಿಸ ಬಲ್ಲೆ. ಈಗ ನಾನು ನಿಪಿ-1 ರ ಕ್ರಯದ ಕರಾರು ಪತ್ರವನ್ನು ನೋಡುತ್ತಿದ್ದು, ಅದರ ಮೇಲೆ 1 ರಿಂದ 3 ನೆ ಪ್ರತಿವಾದಿಯರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಈಗ ನಾನು ನಮ್ಮ ವಕೀಲರು ನನ್ನ ಹಾಗೂ 1 ನೇ ಪ್ರತಿವಾದಿಯ ಮತ್ತು 3 ನೆ ಪ್ರತಿವಾದಿಯ ಪರ ನ್ಯಾಯಾಲಯಕ್ಕೆ ಸಲ್ಲಿಸಿರವ ವಕಾಲತ್ತನ್ನು ನೋಡುತ್ತಿದ್ದು ಅದರಲ್ಲಿ 1 ನೇ ಪ್ರತಿವಾದಿ, 3 ನೇ ಪ್ರತಿವಾದಿ ಹಾಗೂ ನನ್ನ ಸಹಿಗಳು ಇವೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಬ್ಬೆಟ್ಟಿನ ಗುರುತು ಇರುವುದು. ಈಗ ನಾನು ನಿಪಿ-14 ರಿಂದ 17 ಸ್ವೀಕೃತಿ ಪತ್ರಗಳನ್ನು ನೋಡುತ್ತಿದ್ದು, ನಿಪಿ-14 ರಿಂದ ನಿಪಿ-16 ರ ಸ್ವೀಕೃತಿ ಪತ್ರಗಳಲ್ಲಿ 1 ರಿಂದ 3 ನೇ ಪ್ರತಿವಾದಿಯ ಸಹಿ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-17 ರಲ್ಲಿ ನನ್ನ ಸಹಿ ಇದೆ ಎಂದರೆ ಸರಿ. ನಿಪಿ-1 ರ ಕರಾರು ಪತ್ರವನ್ನು ನನ್ನ ವಕೀಲರ ಮುಖಾಂತರ ಓದಿ ತಿಳಿದುಕೊಂಡಿರುತ್ತೇನೆ. ನಿಪಿ-1 ರಲ್ಲಿ ದಾವಾ ಸ್ವತ್ತನ್ನು 1 ರಿಂದ 3 ನೇ ಪ್ರತಿವಾದಿಯರು ಮಾರಾಟ ಮಾಡಿರುವುದಾಗಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ವಾದಿ ಕ್ರಯಕ್ಕೆ ಪಡೆದಿದ್ದ ಜಮೀನಿನ ಪೂರ್ವಕ್ಕೆ ಅದೇ ಜಮೀನಿನ ಎಂದರೆ 1 ನೆ ಪ್ರತಿವಾದಿಯ ಉಳಿಕೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ವಾದಿ ಸದರಿ ಜಮೀನನ್ನು ಕ್ರಯಕ್ಕೆ ಪಡೆದಿರುವುದಿಲ್ಲ ಆದರೆ ಆ ರೀತಿ ಉಳಿಕೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಅಣ್ಣೇಗೌಡರ ಜಮೀನು ಇರುತ್ತದೆ ಎಂದರೆ ಸರಿ, ಉತ್ತರಕ್ಕೆ ತಿಮ್ಮೇಗೌಡರ ಜಮೀನು ಇರುತ್ತದೆ ಎಂದರೆ ದಕ್ಷಿಣಕ್ಕೆ ನಾಗರಾಜು ಮತ್ತು ಸಣ್ಣೇಗೌಡರ ಜಮೀನು ಇರುತ್ತದೆ ಎಂದರೆ ಸರಿ. ಈ ಚೆಕ್ಕು ಬಂದಿಯಲ್ಲಿರುವ ಜಮೀನನ್ನು ವಾದಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 87/3 ಪಿ4 ರಲ್ಲಿ 1 ಎಕರೆ ಜಮೀನನ್ನು ವಾದಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚೆಕ್ಕು ಬಂದಿಯಲ್ಲಿ 1 ಎಕರೆ ವಿಸ್ತೀರ್ಣದ ಜಮೀನು ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರ ಸರ್ವೆ ನಂಬರ್ 87/4

ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಚೆಕ್ಕು ಬಂದಿ ಸರ್ವೆ ನಂಬರ್ 87/3 ಪಿ4 ಕ್ಕೂ ಸಂಬಂಧಪಟ್ಟಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ರ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ನೀಲಾಚಾರಿ ಬಿನ್ ದಾಸಚಾರಿ, ಹಾಗೂ ರಾಜೇಗೌಡ ಬಿನ್ ತಮ್ಮೇಗೌಡ, ಯಲಗತ್ತವಳ್ಳಿ ಗ್ರಾಮದವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿದಾರರು ನನ್ನ ಊರಿನವರು ಎಂದರೆ ಸರಿ.

ನಾನು ಕ್ರಯಕ್ಕೆ ಪಡೆದಿರುತ್ತೇನೆ ಎಂದು ಹೇಳಲಾದ ಜಮೀನನ್ನು ಯಾವ ಇಸವಿಯಲ್ಲಿ ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಗೊತ್ತಿಲ್ಲ, ಎಷ್ಟು ವರ್ಷಗಳ ಹಿಂದೆ ಕ್ರಯಕ್ಕೆ ಪಡೆದಿರುತ್ತೇನೆ ಎಂದು ಗೊತ್ತಿಲ್ಲ. ನಾನು ಕ್ರಯಕ್ಕೆ ಪಡೆದ ಜಮೀನಿನ ಸರ್ವೆ ನಂಃ87/4 ಆಗಿರುತ್ತದೆ ಹಾಗೂ ಅದರ ವಿಸ್ತೀರ್ಣ 1 ಎಕರೆ 12 ಗುಂಟೆ ಆಗಿರುತ್ತದೆ. ನಾನು ಕ್ರಯಕ್ಕೆ ಪಡೆಯುವಾಗ ಸದರಿ ಜಮೀನು 1 ನೇ ಪ್ರತಿವಾದಿಯ ಹೆಸರಿಗೆ ಇತ್ತು, ಅದಕ್ಕೂ ಮೊದಲು ಅವರ ತಂದೆ ಸುಬ್ಬೇಗೌಡರ ಹೆಸರಿನಲ್ಲಿ ಇತ್ತು. ಸದರಿ ಸರ್ವೆ ನಂಬರ್ 87/4 ಜಮೀನು ಮೊದಲು ಯಾವ ಸರ್ವೆ ನಂಬರ್ ಗೆ ಸೇರಿದ್ದಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ಸ.ನಂಃ 87/4 ಆಗುವ ಮೊದಲು ಸರ್ವೆ ನಂಬರ್ 87/3 ಪಿ4 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಹಿಂದಿನ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಾನು ಕ್ರಯಕ್ಕೆ ಪಡೆದಿರುತ್ತೇನೆ ಎಂದು ಹೇಳಲಾದ ಜಮೀನಿನ ಚೆಕ್ಕು ಬಂದಿ ಪೂರ್ವಕ್ಕೆ ಲಕ್ಷ್ಮಮ್ಮನವರ ಉಳಿಕೆ 12 ಗುಂಟೆ ಜಮೀನು, ಪಶ್ಚಿಮಕ್ಕೆ ಅಣ್ಣೇಗೌಡರ ಜಮೀನು, ಉತ್ತರಕ್ಕೆ ತಿಮ್ಮೇಗೌಡರ ಜಮೀನು, ದಕ್ಷಿಣಕ್ಕೆ ನಾಗರಾಜು ಹಾಗೂ ಸಣ್ಣೇಗೌಡರ ಜಮೀನು ಇರುತ್ತದೆ. ಸದರಿ ಚೆಕ್ಕು ಬಂದಿ 1 ಎಕರೆ ಜಮೀನಿಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದರೆ ಸರಿ. ನಾನು ಈಗ ಹೇಳಿದ ಜಮೀನಿನ ಚೆಕ್ಕು ಬಂದಿ ಹಾಗೂ ಹಿಂದೆ ಈ ಜಮೀನಿನ ಸರ್ವೆ ನಂಬರ್ ಆಗಿದ್ದ ಸರ್ವೆ ನಂಬರ್ 87/3 ಪಿ4 ರ ಜಮೀನಿನ ಚೆಕ್ಕು ಬಂದಿ ಒಂದೇ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಎರಡು ಜಮೀನುಗಳ ಚೆಕ್ಕು ಬಂದಿ ಒಂದೇ ಆಗಿದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ಸರ್ವೆ ನಂಬರ್ 87/3 ಪಿ4 ರ ಜಮೀನಿಗೆ ಆದ ಕರಾರು ಪತ್ರವೇ ಈಗ ನಾನು ಖರೀದಿ ಮಾಡಿರುತ್ತೇನೆ ಎಂದು ಹೇಳುವ ಜಮೀನು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಕ್ರಯಕ್ಕೆ ಪಡೆದಿರುತ್ತೇನೆ ಎಂದು ಹೇಳಲಾದ ಜಮೀನಿನ ಮೂಲ ಪತ್ರವನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಮುಂದಿನ ದಿನಾಂಕದಲ್ಲಿ ಸದರಿ ಪತ್ರವನ್ನು ನಾನು ಹಾಜರು ಪಡಿಸಬಹುದು. ನಿಡಿ-5 ರಂತೆ ನಾನು

ಹಾಜರು ಪಡಿಸಿರುವ ಕ್ರಯ ಪತ್ರದಲ್ಲಿರುವ ಸಹಿಗಳನ್ನು ನಾನು ಗುರುತಿಸ ಬಲ್ಲೆ. ಅದರಲ್ಲಿ 1 ಮತ್ತು 3 ನೇ ಪ್ರತಿವಾದಿಯರ ಸಹಿಗಳು ಇರುತ್ತವೆ. ನಿಪಿ-5 ರ ಮೂಲ ದಾಖಲೆಯನ್ನು ಇಲ್ಲಿ ಹಾಜರು ಪಡಿಸಿದರೆ ಅದರಲ್ಲಿರುವ ಸಹಿಗಳ ಬಗ್ಗೆ ಗೊತ್ತಾಗುವುದು ಎಂದು ತಿಳಿದು ಅದರ ಮೂಲ ದಾಖಲೆಯನ್ನು ನಾನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಹಾಗೂ 1 ರಿಂದ 3 ನೇ ಪ್ರತಿವಾದಿಯರು ನಿಪಿ-5 ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿಗೆ ಸಂಬಂದಿಸಿದಂತೆ ನನಗೆ ಹಾಗೂಾ 1 ರಿಂದ 3 ನೇ ಪ್ರತಿವಾದಿಯರಿಗೆ ನೋಟೀಸ್ ನೀಡಿದ್ದರು ಎಂದರೆ ಸರಿ. ನಿಡಿ-5 ರ ಕ್ರಯ ಪತ್ರ ಕಾನೂನಿನ ದೃಷ್ಟಿಯಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ ಸದರಿ ಕ್ರಯ ಪತ್ರ ದಿಃ24-06-2010 ರಲ್ಲಿ ಆಗಿರುವ ಕ್ರಯದ ಕರಾರು ಪತ್ರಕ್ಕೆ ಬದ್ದ ಪಡಿಸುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರು ಅಗ್ರಹಾರ ಗ್ರಾಮದಲ್ಲಿ ಜಮೀನು ಖರೀದಿಸುವ ಸಲುವಾಗಿ ದಾವಾ ಸ್ವತ್ತನ್ನು ವಾದಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ

3 ನೇ ಪ್ರತಿವಾದಿಯ ಗಂಡನ ಹೆಸರು ಸ್ವಾಮಿಗೌಡ, ಹಾಗೂ ತಂದೆಯ ಹೆಸರು ನಂಜೇಗೌಡ ಆಗಿರುತ್ತದೆ. 3 ನೇ ಪ್ರತಿವಾದಿಯ ಕುಟುಂಬ ದಿಃ07-07-2010 ರಲ್ಲಿ ಮುಗಳೂರು ಗ್ರಾಮದಲ್ಲಿ ಜಮೀನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮಗ ಎಂದರೆ ಸರಿಯಲ್ಲ.

ಯಲಗತ್ತವಳ್ಳಿ ಗ್ರಾಮದ ಕೆಂಗೇಗೌಡರ ಮಗ ಕೃಷ್ಣೇಗೌಡ ನನಗೆ ಗೊತ್ತಿಲ್ಲ. ನಂಜೇಗೌಡರ ಹೆಂಡತಿ ಲಕ್ಷ್ಮಮ್ಮ ಎಂದರೆ ಈ ದಾವೆಯ 1 ನೇ ಪ್ರತಿವಾದಿ. 1 ಹಾಗೂ 3 ನೇ ಪ್ರತಿವಾದಿಯರು ಸ.ನಂಃ 86/3 ರಲ್ಲಿ 20 ಗುಂಟೆ ಜಮೀನನ್ನು ಸದರಿ ಕೆಂಗೇಗೌಡರ ಮಗ ಕೃಷ್ಣೇಗೌಡರಿಗೆ 1994 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾರಾಯಣ ಎಂದರೆ ಲಕ್ಷ್ಮಮ್ಮನ ಮಗ ಎಂದರೆ ಸರಿಯಲ್ಲ. ಲಕ್ಷ್ಮಮ್ಮನವರ ಉಳಿಕೆ ಜಮೀನನ್ನು ನಾರಾಯಣವರವರೇ ಉಳುಮೆ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ರ ಕ್ರಯದ ಕರಾರು ಪತ್ರ ಆಗಿರುವುದು ನನಗೆ ಹಾಗೂ 1 ರಿಂದ 3 ನೇ ಪ್ರತಿವಾದಿಯರಿಗೆ ತಿಳಿದಿದ್ದರೂ ಸಹ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿ ನಮೂದಾಗಿರುವ ಆಸ್ತಿ ಹಾಗೂ ನಾನು

ಕ್ರಯಕ್ಕೆ ಪಡೆದಿರುತ್ತೇನೆ ಎಂದು ಹೇಳಲಾದ ಆಸ್ತಿಯ ಚೆಕ್ಕು ಬಂದಿ ಒಂದೇ ಆಗಿದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಕ್ಕೆ 1 ರಿಂದ 3 ನೇ ಪ್ರತಿವಾದಿಯ ತಮ್ಮ ಹೆಬ್ಬೆಟ್ಟಿನ ಗುರುತು ಹಾಗೂ ಸಹಿಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯನ್ನು ನ್ಯಾಯಾಲಯಕ್ಕೆ ಕರೆಸಿ ನಾನು ಸಾಕ್ಷ್ಯ ನುಡಿಸಬಲ್ಲೆ. ಅದೇ ರೀತಿ ನಾನು ಕ್ರಯಕ್ಕೆ ಪಡೆದ ಸ್ವತ್ತಿನ ಮೂಲ ಕ್ರಯ ಪತ್ರವನ್ನು ನಾನು ನ್ಯಾಯಲಯಕ್ಕೆ ಹಾಜರು ಪಡಿಸಬಲ್ಲೆ. 1 ರಿಂದ 3 ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಬರುವುದನ್ನು ನಾನೇ ತಡೆಯುತ್ತಿದ್ದೇನೆ ಏಕೆಂದರೆ ಅವರು ಬಂದರೆ ನಿಪಿ-1 ಕ್ರಯದದ ಕರಾರು ಪತ್ರ ಸತ್ಯಾಂಶ ಹೊರಬೀಳಬಹುದು ಎಂದು ಎಂದರೆ ಸರಿಯಲ್ಲ. ನಾನು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅಸಲು ದಾವಾ 313/2017 ರಂತೆ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ಕ್ರಯದ ಕರಾರು ಪತ್ರ ಇನ್ನೂ ಚಾಲ್ತಿಯಲ್ಲಿ ಇದೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**